ಯೋಚನೆ ಮಾಡುತ್ತಾರೆ, ಈ ವರ್ಗದ ಜನರು ಏನಿದ್ದಾರೆ ಇವರೆಲ್ಲಾ ಸೇರಿಕೊಂಡು ಈ ರೀತಿ ಮಾಡಿದ್ದಾರೆ. ಇಂತಹ ನಾಲ್ಕಾರು ಜನರನ್ನು ತೆಗೆದುಕೊಂಡು ಸುಲಭವಾಗಿ ಪಟ್ಟಿ ಮಾಡುವುದಕ್ಕೆ ಅವಕಾಶವಿದೆ ಅದೇನೇ ಇದ್ದರೂ even tomorrow, if Sri C.M. Arumugham comes with the delegation of 5 or 10 members to meet me, I am prepared to meet them either at my House or at the Office wherever he pleases. So, there is nothing wrong in meeting the people. Afterall we are here to meet the people. The incident took place on account of the reason which I have already given.

SRI C.M. ARUMUGHAM.—Sir, the Hon. Chief Minister has agreed that those people were innocent. They came exclusively to meet the Hon. Chief Minister and the Hon Speaker. But, some incident took place. Out of 200 people arrested, 185 people have been released and 15 people have been charge-sheeted. I would only appeal to the Hon. Chief Minister to withdraw the cases filed against these people, because they were already beaten by the police and if cases are going on, they will be put on further harassment. I therefore appeal to the Hon. Chief Minister to kindly withdraw the cases filed, gainst them.

SRI R. GUNDU RAO.—That, I will examine.

MR. CHAIRMAN.—The matter is closed.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಈಗ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದನ್ನೇ ಹೇಳಿದ್ದಾರೆ. ಅವರು ಮಾಡಿದಂಥ ಕೆಲಸಕ್ಕೆ ಸಮರ್ಥನೆ ಮಾಡಿದ್ದಾರೆ. ಇದರ ಬಗ್ಗೆ ನನ್ನ ಅಸಮಾಧಾನ ವಿದೆ, ಇವರು ಅವರನ್ನು ಈ ರೀತಿಯಾಗಿ ರಕ್ಷಣೆ ಮಾಡುವುದಕ್ಕೆ ಹೋಗಬಾರದು. ನಮ್ಮ ವರದಿ ಪ್ರಕಾರ ಪೋಲೀಸರು ಅತಿರೇಕವಾಗಿ ವರ್ತನೆ ಮಾಡಿದ್ದಾರೆ ಎಂದು ಕೇಳಿದ್ದೇವೆ. ಇದರ ಮೇಲೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ರೀತಿ ಅತಿರೇಕ ಯಾರ್ಯಾರು ಮಾಡಿದ್ದಾರೆ ಇವರ ಬಗ್ಗೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳಿ, ನನ್ನ ಅಭ್ಯಂತರವಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಅವರ ಬಾಯಿಂದಲೇ ಅವರೆಲ್ಲೂರೂ ತಪ್ಪಿತಸ್ಥರಲ್ಲ, ಅವರಲ್ಲಿ ಇನ್ನೋಸೆಂಟ್ ಪೀಪಲ್ ಇದ್ದಾರೆ, ಕೆಲವರು ಆ ರೀತಿ ಮಾಡಿದರು, ನಿರಪರಾಧಿಗಳು ಸಿಕ್ಕಿಕೊಂಡರು ಎಂದು ಹೇಳಿದ್ದಾರೆ. ಆದ್ದರಿಂದ ಅವರು ನಿರಪರಾಧಿಗಳು ಎಂದು ಅವರ ಬಾಯಿಂದ ಬಂದಿರುವುದರಿಂದ ಈ ವಿಷಯವನ್ನು ಅವರಿಗೇ ಬಿಟ್ಟುಬಿಟ್ಟಿದ್ದೇನೆ. ಇನ್ನೊಂದು ವಿಷಯವೇನೆಂದರೆ ನಿನೆ ಯ ದಿವಸವೇ ನಾವು ಫೈನಾನ್ಸಿಯಲ್ ಬ್ಯುಸಿನ್ಸನ್ನು ಪ್ರಾರಂಭ ಮಾಡಬೇಕಿತ್ತು, ಪ್ರಾರಂಭ ಮಾಡಲಿಲ್ಲ. ಇವತ್ತು ಇನ್ನೂ ಪ್ರಾರಂಭ ಮಾಡಿಲ್ಲ, ಈಗ ಗವರ್ನಮೆಂಟಿಗೆ ಯುವ ಸೂಚನೆಗಳನ್ನು ಏನು ತೆಗೆದುಕೊಳ್ಳಬೇಕಾಗಿದೆ ಅವೆಲ್ಲವನ್ನೂ ಬಿಟ್ಟು ನಾವು ಫೈನಾನ್ಸಿಯಲ್ ಬ್ಯುಸಿನ್ ಸನ್ನು ಪ್ರಾರಂಭ ಮಾಡೋಣ ಎಂದು ನಾನು ಹೇಳುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ.

## Screening of picture entitled "Grahana"

ಶ್ರೀ ಮೈಕೇಲ್ ಫರ್ನಾಂಡಿಸ್.—ಸ್ವಾಮಿ, ಕನ್ನಡ ಭಾಷೆಯಲ್ಲಿ ಹೊಸ ಅಲೆಯ ಚಿತ್ರ 'ಗ್ರಹಣ' ಇನ್ನೂ ಕರ್ನಾಟಕ ರಾಜ್ಯದಲ್ಲಿ ಪ್ರದರ್ಶನಕ್ಕೆ ಬಿಡುಗಡೆಯಾಗಲಿಲ್ಲ ಎಂದು ಹೇಳಿ ಅದನ್ನು ತಯಾರು ಮಾಡಿದಂಥ ಬಡ ಯುವಕ, ಕಾರ್ಮಿಕ ವರ್ಗದವರು ಮುಷ್ಕರ ಹೂಡಿದ್ದಾರೆ. ಅವರು ನಷ್ಟದಲ್ಲಿ ಚಿತ್ರ ತಯಾರು ಮಾಡಿದ್ದಾರೆ. ಅದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದೆ ಮತ್ತು ರಷ್ಯಾ, ಅಮೇರಿಕಾ, ಫ್ರಾನ್ಸ್‌ನಲ್ಲಿ ಹಾಗೂ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ

ಪ್ರದರ್ಶನವಾಗಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಅದು ಪ್ರದರ್ಶನವಾಗಲಿಲ್ಲ. ಇದು ಎಂತಹ ಅನ್ಯಾಯ, ಕರ್ನಾಟಕ ರಾಜ್ಯದಲ್ಲಿ ಗ್ರಹಣ ಚಿತ್ರಕ್ಕೆ ಗ್ರಹಣ ಹಿಡಿದಿದೆ ಎಂದರೆ ಇದಕ್ಕಿಂತ ಅನ್ಯಾಯ ಬೇರೊಂದಿಲ್ಲ. ಆದ್ದರಿಂದ ನಾನು ಮಾನ್ಯ ಸಂಬಂಧಪಟ್ಟ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ ' ಗ್ರಹಣ ' ಚಿತ್ರವನ್ನು ಆದಷ್ಟು ಜಾಗ್ರತೆ ಇಲ್ಲಿ ಪ್ರದರ್ಶನಕ್ಕೆ ಬಿಡುಗಡೆ ಮಾಡಿಸಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎ.ಜಿ. ಕೊಡಗಿ.—ಸ್ವಾಮಿ, ನಾನು ಆಗಲೇ ಸಬ್ಜೆಕ್ಟ್ ರೈಸ್ ಮಾಡಿದ್ದರ ಮೇಲೆ ತಾವು ರೂಲಿಂಗ್ ಕೊಡಲಿಲ್ಲ.

MR. CHAIRMAN.—That motion is not admitted. I have already said that the matter was closed.

ಶ್ರೀ ಕೆ. ರಾಮಭಟ್.—ಸ್ವಾಮಿ, ರೂಲ್ ೩೧೨ರ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ. ಫಸ್ಟ್ ಇಯರ್ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಇದು ಮಹತ್ವದ ವಿಚಾರ. ತಾವು ಇದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು.

ಛೇರ್‌ಮನ್.—ಇದು ೨-೩ ದಿವಸದಿಂದ ಇದೆ. ಇವತ್ತು ಎಜುಕೇಷನ್ ಮಿನಿಸ್ಟರ್ ಎಲ್ಲೋ ಹೋಗಿದ್ದಾರೆ. ಇದನ್ನು ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಕೆ. ರಾಮಭಟ್.—ಇದಕ್ಕೆ ಬೇರೆಯವರು ಉತ್ತರ ಕೊಡಲಿ.

ಛೇರ್‌ಮನ್.—ಮಾನ್ಯ ಎಜುಕೇಷನ್ ಮಿನಿಸ್ಟರ್ ಇಲ್ಲಿ ಇಲ್ಲ. ಇದೆಲ್ಲ ಅನಿರೀಕ್ಷಿತವಾಗಿ ನಡೆದಿದೆ. ಇದಕ್ಕಾಗಿ ನಾವು ಮಾನ್ಯ ಮಂತ್ರಿಗಳಲ್ಲಿ ತಪ್ಪು ಕಂಡುಹಿಡಿಯುವುದಕ್ಕೆ ಆಗುವುದಿಲ್ಲ. ಇದನ್ನು ನಾಳೆ ತೆಗೆದುಕೊಳ್ಳುತ್ತೇನೆ,

ಶ್ರೀ ಪಿ. ರಾಮದೇವ್.—ಸ್ವಾಮಿ, ನಾನೂ ಕೂಡ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇನೆ. ವಿದ್ಯಾರ್ಥಿಗಳ ಸಮಸ್ಯೆಗೆ ಸಂಬಂಧಪಟ್ಟಂತೆ ಕೇಳಿದ್ದೇನೆ. ಅದಕ್ಕೆ ಪ್ರಾಯಮುಖ್ಯತೆ ಕೊಡಬೇಕು.

ಶ್ರಿ ಕೆ. ರಾಮಭಟ್.—ಇವತ್ತು ಅಜೆಂಡಾದಲ್ಲಿ ಈ ವಿಚಾರ ಇದೆ. ಇವತ್ತಿನ ಕಾರ್ಯಕ್ರಮದಂತೆ ತಾವು ನಡೆದುಕೊಳ್ಳಬೇಕು. ಆಗಲೇಮಾನ್ಯ ವಿರೋಧಪಕ್ಷದ ಉಪನಾಯಕರು ಹೇಳಿದಹಾಗೆ ಮಾಡುವುದಿಲ್ಲ.

ಛೇರ್‌ಮನ್.—ಇಲ್ಲಿ ಮಾನ್ಯ ಎಜುಕೇಷನ್ ಮಿನಿಸ್ಟರ್ ಇಲ್ಲ. ಅದಕ್ಕೊಸ್ಕರ ಇದನ್ನು ಮುಂದಕ್ಕೆ ಹಾಕಿದ್ದೇನೆ. ಆದನ್ನು ಆಮೇಲೆ ತೆಗೆದುಕೊಳ್ಳೋಣ ಎಂದು ಅವರೇ ಹೇಳಿಕಳಿಸಿದ್ದಾರೆ.

ಶ್ರೀ ಕೆ. ರಾಮಭಟ್.—ಆದನ್ನು ನಾನು ಒಪ್ಪುವುದಕ್ಕೆ ತಯಾರು ಇಲ್ಲ. ಇದು ವಿದ್ಯಾರ್ಥಿಗಳ ಜೀವನಮರಣ ಪ್ರಶ್ನೆಯಾಗಿದೆ. ನಿನ್ನೆಗೆ ಇದ್ದದ್ದನ್ನು ಇವತ್ತಿಗೆ ಇಟ್ಟುಕೊಂಡಿದ್ದಾರೆ. ಈ ರೀತಿ ಮುಂದಕ್ಕೆ ಹಾಕಿಕೊಂಡು ಹೋಗುತ್ತಾ ಇದ್ದರೆ ನಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳುವುದಕ್ಕಾಗುವುದಿಲ್ಲ, ಆದ್ದರಿಂದ ಮಾನ್ಯ ಉಪ ಮಂತ್ರಿಯವರು ಇಲ್ಲೇ ಇದ್ದಾರೆ. ಅವರೇ ಉತ್ತರ ಕೊಡಲಿ.

ಛೇರ್‌ಮನ್.—ಇಲ್ಲಿ ಎಜುಕೇಷನ್ ಮಿನಿಸ್ಟರ್ ಇಲ್ಲ; ಆದ್ದರಿಂದ ಇದನ್ನು ನಾಳೆ ತೆಗೆದುಕೊಳ್ಳೋಣ ಎಂದು ನಾನು ಹೇಳಿದ್ದೇನೆ.

ಶ್ರೀ ಕೆ. ರಾಮಭಟ್.—ಇವತ್ತು ಮಾನ್ಯ ಎಜುಕೇಷನ್ ಮಿನಿಸ್ಟರ್ ಇಲ್ಲ, ನಾಳೆ ನಾನು ಇರುವುದಿಲ್ಲ. ಆದ್ದರಿಂದ ಇಲ್ಲಿ ಮಾನ್ಯ ಉಪಮಂತ್ರಿಯವರು ಇಲ್ಲೇ ಇದ್ದಾರೆ. ಅವರು ಉತ್ತರ ಕೊಡಲಿ.

ಛೇರ್‌ಮನ್.—ಇಲ್ಲಿ ಮಾನ್ಯ ಎಜುಕೇಷನ್ ಮಿನಿಸ್ಟರ್ ಇಲ್ಲದಾಗ ಅವರು ಹೇಗೆ ಉತ್ತರ ಕೊಡುತ್ತಾರೆ?

ಶ್ರೀ ಕೆ. ರಾಮಭಟ್.—ಮಾನ್ಯ ಮಂತ್ರಿಗಳು ಏತಕ್ಕೆ ಇರುವುದಿಲ್ಲ? ಇದನ್ನು ಏತಕ್ಕೆ ಅಜೆಂಡಾದಲ್ಲಿ ಹಾಕಬೇಕು? ನಾವು ಇಲ್ಲಿ ಸದಸ್ಯರಾಗಿ ಇರುವುದು ಏತಕ್ಕೆ? ನಮ್ಮನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳಬಾರದು. ನಾನು ರೂಲ್ ೩೧೨ರ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ. ಈ ವಿಚಾರವನ್ನು ಅಜೆಂಡಾದಲ್ಲಿ ಏತಕ್ಕೆ ಹಾಕಿದರು ಎಂದು ಕೇಳುತ್ತೇನೆ.

ಛೇರ್‌ಮನ್.—ನೀವು ದಯಮಾಡಿ ಕೇಳಿತುಕೊಳ್ಳಿ. ನಿಮ್ಮ ಸಬ್ಜೆಕ್ಟ್‌ನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ಎಜುಕೇಷನ್ ಮಿನಿಸ್ಟರ್ ಇಲ್ಲ. ಇಲ್ಲಿ ಕೆ.ಎಸ್.ಆರ್.ಟಿ.ಸಿಗೆ ಸಂಬಂಧಪಟ್ಟಹಾಗೆ ವಿಚಾರ ಕೂಡ ಇದೆ, ಸಂಬಂಧಪಟ್ಟ ಮಾನ್ಯ ಮಂತ್ರಿಯವರು ನಾಳೆ ತೆಗೆದುಕೊಳ್ಳಿ ಎಂದು ಕಾಗದ ಬರದಿದ್ದಾರೆ. ಈ ಸದನದ ಮಾನ್ಯ ಉಪನಾಯಕರು, ಮಾನ್ಯ ಮಂತ್ರಿಗಳು ಹೇಳಿರುವುದರಿಂದ ಮತ್ತು ಈ ಸಭೆಯ ಡಿಸಿಷನ್ ಕೇಳಿ ಆ ರೀತಿಯ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಶ್ರೀ ಕೆ. ರಾಮಭಟ್.—ಅವರು ಈಗ ಮಧ್ಯದಲ್ಲಿ ಹೇಳಿದರು. ಅದನ್ನು ನೀವು ಹೇಗೆ ಒಪ್ಪುತ್ತೀರಿ? ನಾವು ಯಾರೂ ಇಲ್ಲಿ ಹೊಸ ಸದಸ್ಯರು ಇದ್ದೇವೆ, ನಮ್ಮನ್ನು ಆಲಕ್ಷ್ಯ ಮಾಡುತ್ತಿದ್ದಾರೆ. ನಾವು ಏನಾದರೂ ಕಳಿಸಿದರೆ ಅದಕ್ಕೆ ಇಷ್ಟು ಲಘುವಾಗಿ ಟ್ರೀಟ್‌ಮೆಂಟ್ ಸಿಕ್ಕುತ್ತದೆಯಲ್ಲಾ ಎಂದು ನಮಗೆ ದುಃಖವಾಗುತ್ತಿದೆ.

ಛೇರ್‌ಮನ್.—ನೀವು ಹೊಸಬರು, ನಿಮ್ಮನ್ನು ಆಲಕ್ಷ್ಯ ಮಾಡಬೇಕು ಅಂತ ಏನೂ ಇಲ್ಲ. ನೀವು ಹೇಳುವ ರೀತಿಯಲ್ಲಿ ಎಲ್ಲಾ ಹೇಳಿದ್ದಾರೆ, ನಮ್ಮ ಎಜುಕೇಷನ್ ಮಿನಿಸ್ಟರ್ ಬೆಳಗ್ಗೆ ಎಲ್ಲಿಗೋ ಹೋಗ ಬೇಕಾಗಿ ಬಂತು, ಅನಿರೀಕ್ಷಿತವಾಗಿ ನಡೆದುಹೋಯಿತು, ಅವರು ಇಲ್ಲಿ ಇಲ್ಲದೇ ಇರುವುದರಿಂದ ನಾಳೆ ತೆಗೆದುಕೊಳ್ಳೋಣ ಎಂದು ನಾನು ಹೇಳಿದ್ದೇನೆ. ದಯವಿಟ್ಟು ನೀವು ಸಹಕರಿಸಿ.

೪.೩೦ ಪಿ.ಎಂ.

ಶ್ರೀ ಕೆ. ರಾಮಭಟ್.—ಈ ರೀತಿ ಮಾತನಾಡಿದಕ್ಕೆ ನಾನು ಕ್ಷಮೆ ಕೇಳುತ್ತೇನೆ. ನಮಗೆ ಕೇಳಂವು ದಕ್ಕೆ ಅವಕಾಶ ಸಿಕ್ಕುವುದಿಲ್ಲ, ಸಿಕ್ಕಿದಾಗ ಈ ದುರ್ಗತಿ ಬರುತ್ತಾ ಇದೆ,

ಶ್ರೀ ಜೆ.ಎಚ್. ಪಟೀಲ್.—ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿರುವ ಡಿ.ಸಿ.ಸಿ. ಬ್ಯಾಂಕಿನಿಂದ ಎರಡು ತಿಂಗಳ ಹಿಂದೇನೇ ಕೋಟ್ಯಾಂತರ ರೂಪಾಯಿ ರೈತರಿಗೆ ಸಾಲ ಹಂಚುವುದು ತಡವಾಗಿ ಅವ್ಯವಸ್ಥೆಯಾಗಿದೆ, ರೈತರಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳದೇ ಹೋದರೆ ಅದರ ಪ್ರಯೋಜನವಾಗುವುದಿಲ್ಲ. ಆದ್ದರಿಂದ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಶ್ರೀ ಕೆ. ರಾಮ್‌ಭಟ್.—ನಮ್ಮನ್ನು ಸಭೆಯಲ್ಲಿ ಆಲಕ್ಷ್ಯ ಮಾಡಲಾಗುತ್ತಿದೆ ಎನ್ನುವಂಥ ವಿಷಯವನ್ನು ಹೇಳಬೇಕಾಗಿದೆ. ಸಾಮಾನ್ಯವಾಗಿ ನಮ್ಮ ಪ್ರಶ್ನೆ ಬರುವುದಿಲ್ಲ, ನಾನು ಮೇಲಿಂದ ಮೇಲೆ ಎದ್ದು ಮಾತನಾಡುವುದಿಲ್ಲ. ಇದು ಸಾವಿರಾರು ವಿದ್ಯಾರ್ಥಿಗಳ ಪ್ರಶ್ನೆ. ಉಂಟು ಇದು ನಿನ್ನೆ ಇತ್ತು ಇವತ್ತಿಗೆ ಹಾಕಿದಿರಿ, ಇವತ್ತು ಮಂತ್ರಿಗಳಿಲ್ಲ, ನಾಳೆ ನಾನು ಇರುವುದಿಲ್ಲ. ನಾನು ಇಲ್ಲಿ ಏಕೆ ಇರಬೇಕು. ನಾನೇನು ಮಾಡಬೇಕು ಎಂದು ತಾವೇ ಹೇಳಿ. ತಮ್ಮ ಕಛೇರಿಗೆ ಬಂದರೆ ನ್ಯಾಯ ಸಿಕ್ಕುತ್ತಾ ಇಲ್ಲ. ವಿದ್ಯಾರ್ಥಿಗಳಿಗೆ ಮಂಡಕ್ಕೆ ಹೋಗಲಿಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.—ನನ್ನ ಬಾಯನ್ನೇ ಮುಚ್ಚಿಸುತ್ತಿದ್ದೀರಿ.

ಶ್ರೀ ಕೆ. ರಾಮಭಟ್.—ನಾನು ಹೇಳುವುದನ್ನು ಕೇಳಬೇಕು. ನಾನು ತಮಗೆ ಹೇಳುತ್ತಾ ಇರುವುದು ಏನೆಂದರೆ.....

MR SPEAKER.—The Hon. Minister for Education is absent ಆದ್ದರಿಂದ ಆ ಪ್ರಶ್ನೆ ಎತ್ತುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಅದಕ್ಕೋಸ್ಕರ ತಾಳ್ಮೆಯಿಂದ ಇದ್ದರೆ ಸೋಮವಾರ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಕೆ. ರಾಮ್‌ಭಟ್.—ಈ ಪ್ರಶ್ನೆ ನಿನ್ನೆ ಇತ್ತು, ತಾವು ಇವತ್ತಿಗೆ ಇಟ್ಟಿರಿ, ನಾಳೆ ನಾನು ಇರುವುದಿಲ್ಲ, ಆದ್ದರಿಂದ ನಾನೇನು ಮಾಡಬೇಕು ಹೇಳಿ,

ಅಧ್ಯಕ್ಷರು.—ಸಹಕಾರ ಕೊಡಬೇಕು.

ಶ್ರೀ ಕೆ. ರಾಮ್‌ಭಟ್.—ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಇವತ್ತು ಮಂತ್ರಿಗಳಿಲ್ಲ.

ಅಧ್ಯಕ್ಷರು.—ನೀವು ಈ ರೀತಿ ತ್ರೆಟನ್ ಮಾಡಿದರೆ ಅನುಕೂಲವಾಗುವುದಿಲ್ಲ. ಇವತ್ತು ಮಂತ್ರಿಗಳಿಲ್ಲ. ದಯವಿಟ್ಟು ಸಮಾಧಾನದಿಂದ ಇದ್ದರೆ ಸೋಮವಾರ ತೆಗೆದುಕೊಳ್ಳೋಣ. ತಮ್ಮ ಮನಸ್ಸಿನಲ್ಲಿರುವ ಆತಂಕ ನನಗೆ ಅರ್ಥವಾಗಿದೆ.

ಶ್ರೀ ಆರ್. ಗುಂಡೂರಾವ್.—ಈಗ ಮಾನ್ಯ ವಿದ್ಯಾಮಂತ್ರಿಗಳಿಲ್ಲ, ಅವರು ತಮ್ಮ ಅಪ್ಪಣೆ ಪಡೆದು ಹೋಗಿದ್ದಾರೆ, ಸೋಮವಾರ ಬರುತ್ತಾರೆ. ಮಾನ್ಯ ರಾಮಕೃಷ್ಣರಿಗೆ ಏನು ಸಮಸ್ಯೆ ಇದೆ ಅದರ ಬಗ್ಗೆ ಅವರನ್ನು ಪ್ರತ್ಯೇಕವಾಗಿ ಕರೆದು ಮಾತನಾಡಬೇಕು ಎಂದು ನಾನು ಹೇಳುತ್ತೇನೆ. ಅವರು ಸೋಮವಾರ ಬರುತ್ತಾರೆ.

ಶ್ರೀ ಕೆ. ರಾಮಕೃಷ್ಣ.—ರೂಲ್ ೩೧೨ರ ಪ್ರಕಾರ ಇದನ್ನು ತೆಗೆದುಕೊಳ್ಳಬೇಕು, ಬೇರೆಯವರಿಗೆ ಆಥರೈಸ್ ಮಾಡುವುದಕ್ಕಾಗುವುದಿಲ್ಲ. ೨೦ನೇ ತಾರೀಖು ಕಳೆದ ನಂತರ ಈ ವಿಷಯವನ್ನು ತೆಗೆದುಕೊಂಡರೂ ಪ್ರಯೋಜನವಾಗುವುದಿಲ್ಲ. ನಾಳೆ ನಾನು ಇರುವುದಿಲ್ಲ, ಮಂತ್ರಿಗಳು ಸ್ಟೇಟ್‌ಮೆಂಟಾದರೂ ಕೊಡಲಿ. ಮಂತ್ರಿಗಳು ವಾಲೆಂಟರಿಯಾಗಿ ಇದು ಸರ್ಕಾರದ ಥೋರಣೆ ಎಂದು ಪ್ರೆಸ್‌ಗೆ ಒಂದು ಸ್ಟೇಟ್‌ಮೆಂಟ್ ಕೊಡಲಿ. ಇದು ಸಾವಿರಾರು ವಿದ್ಯಾರ್ಥಿಗಳ ಪ್ರಶ್ನೆ ಇರುವ ಕಾರಣ ನಾನು ಇಷ್ಟು ಒತ್ತಾಯ ಮಾಡಿ ಹೇಳುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರಾದ ರಾಮಕೃಷ್ಣರು ಆಜೆಂಡಾ ಪ್ರಕಾರ ವಿಚಾರ ವಿದ್ದರೂ ಕೂಡ ಎಷ್ಟು ಗಮನ ಸೆಳೆಯಬೇಕೋ ಅಷ್ಟು ಸೆಳೆದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರೂ ಕೂಡ ಅದಕ್ಕೆ ಆದಷ್ಟು ಜಾಗ್ರತೆ ಪರಿಹಾರ ಕಂಡುಹಿಡಿಯುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಇಲ್ಲದಿದ್ದರೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ನಾವು ಮಾನ್ಯ ವಿದ್ಯಾಮಂತ್ರಿಗಳು ಬಂದ ಕೂಡಲೇ ಅವರ ಗಮನಕ್ಕೆ ತಂದು ಅದಕ್ಕೆ ಪರಿಹಾರ ಹುಡುಕೇ ಹುಡುಕುತ್ತೇವೆ. Sir, the Hon. Member has brought the matter to the notice of the Government and the House effectively. The matter will be definitely taken care of and therefore, the hon. Member need not worry about it.

ಶ್ರೀ ಕೆ.ಎಚ್. ಹನುಮೇಗೌಡ.—ನಾನು ಒಂದು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೆ, ಅದು ಇದುವರೆಗೆ ಬರಲಿಲ್ಲ.

Mr. Speaker.—I am sorry. You are breaking the convention.

ಶ್ರೀ ಕೆ.ಎಚ್. ಹನುಮೇಗೌಡ.—ನಾನು ೩ ದಿವಸದಿಂದ ಕಾದಿದ್ದೇನೆ, ಅವಕಾಶವಾಗಲಿಲ್ಲ.

Mr. Speaker.—I request the Chief Whips to pull up the hon. Members and see that whenever a decision is taken, it should be respected by them. ಹೌಸ್‌ನಲ್ಲಿ ಡಿಸಿಷನ್ ತೆಗೆದುಕೊಂಡಿದೆ. ಈಗ ನೆಕ್ಸ್ಟ್ ಐಟಂಗೆ ಹೋಗಬೇಕು. ಅದನ್ನು ಬಿಟ್ಟು ಹೀಗೆ ಇನ್‌ಸಿಸ್ಟ್ ಮಾಡಿದರೆ ಹೇಗೆ ?

ಶ್ರೀ ಕೆ. ಎಚ್ ಹನುಮೇಗೌಡ.– ದಯವಾಡಿ ಒಂದು ನಿಮಿಷ ಅವಕಾಶ ಕೊಡಿ. ನಾನು ಹಾಸನ ಜಿಲ್ಲೆ ವಿಚಾರವಾಗಿ ಒಂದು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೇನೆ. ಅಲ್ಲಿ ೧೫ ದಿವಸಗಳಿಂದ ಒಂದು ಕೆ. ಜಿ. ಗೊಬ್ಬರ ಸಿಕ್ಕುತ್ತಾ ಇಲ್ಲ. ಮಳೆಯಾಗಿದೆ, ರೈತರ ಗತಿ ಏನು.

Mr. Speaker.—Please resume your seat and respect the Chair. You are going against the decision of the House, The Hon. Member is conducting.....

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ಜಿಲ್ಲೆಯಲ್ಲಿ ಮಳೆಯಾಗಿದೆ ಈಗ ಬಿತ್ತನೆ ಕಾಲ, ಒಂದೂ ಕೆ. ಜಿ. ಗೊಬ್ಬರ ಕೂಡ ಸಿಕ್ಕುತ್ತಾ ಇಲ್ಲ. ರೈತರಿಗೆ ತೊಂದರೆಯಾಗಿದೆ. ಮಾರ್ಕೆಟಿಂಗ್ ಫೆಡರೇಷನ್‌ಗೆ ಹೇಳಿದರೂ ಪ್ರಯೋಜನವಾಗಲಿಲ್ಲ, ಯಾರ ಹತ್ತಿರವೂ ಸಿಕ್ಕುತ್ತಾ ಇಲ್ಲ,

MR. SPEAKER.—Please resume your seat. Why are you behaving like this. This is not the way of conducting in the House. The Hon, Member Sri Hanume Gowda is not conducting himself in a proper way ; I do not know why ? The Government has to pull him up. Why don't you discuss with the Ministers ? You being a ruling party Member, have got ample scope to ventilate your grievances.

ಶ್ರೀ ಕೆ. ಹೆಚ್. ಹನುಮೇಗೌಡ.—ಅವರಿಗೆ ಎಷ್ಟು ಅವಕಾಶ ಕೊಡುತ್ತೀರೋ ನಮಗೂ ಅಷ್ಟೇ ಅವಕಾಶ ಕೊಡಿ. ದೇಶದ ರೈತರ ಕಷ್ಟ ಸುಖ ಹೇಳುವುದಕ್ಕೆ ನಮಗೂ ಅಷ್ಟೇ ಅಧಿಕಾರವಿದೆ.

## FINANCIAL BUSINESS

*General Discussion on the Budget for the year 1980-81.*

MR. SPEAKER.—Now, I call Sri B. Basavalingappa, the Deputy Leader of the Opposition to initiate the discussion on the Budget for the year 1980-81.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಅರ್ಥ ಮಂತ್ರಿಗಳವರು ೧೯೮೦-೮೧ನೇ ವರ್ಷದ ಆಂದಾಜುಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ಆಂದಾಜು ಪಟ್ಟಿಯನ್ನು ನೇರವಾಗಿ ವಿಷದೀಕರಿಸಿದ್ದರೆ ಹೆಚ್ಚಿಗೆ ಸಂತೋಷವಾಗುತ್ತಿತ್ತು. ಆದರೆ ಅವರು ನಮ್ಮ ಮುಂದಿಟ್ಟಿರತಕ್ಕ ವರದಿಯ ಎರಡನೇ ಪ್ಯಾರಾದಲ್ಲಿ ಅವರೇ ರಾಜಕೀಯ ಭಾಷಣವನ್ನೇ ಮಾಡಿದ್ದಾರೆ, ಆ ಪ್ಯಾರಾದಲ್ಲಿ ಹೀಗೆ ಹೇಳುತ್ತಾರೆ,

> " ಲೋಕ ಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿ ಅವರ ನೇತೃತ್ವದ ನಮ್ಮ ಪಕ್ಷವು ಭಾರಿ ಬಹುಮತದಿಂದ ಜಯಗಳಿಸಿದ ಅನಂತರ, ಹೊಸ ಸರ್ಕಾರವು ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿದೆ. ನಮ್ಮ ಪಕ್ಷದ ನಾಯಕತ್ವದಲ್ಲಿ ದೇಶದ ಜನತೆಗೆ ಇರುವ ಅಚಲ ವಿಶ್ವಾಸಕ್ಕೆ ಮತ್ತು ಜನತೆಯ ಜೀವನ ಮಟ್ಟವನ್ನು ಸುಧಾರಿಸಿ ಸಾಮಾಜಿಕ, ಆರ್ಥಿಕ ನ್ಯಾಯದಿಂದ ಕೂಡಿದ ಉತ್ತಮ ಜೀವನ ಸೌಲಭ್ಯಗಳನ್ನು ಅವರಿಗೆ ಒದಗಿಸುವ ಬೆಂಬ ಸಮ್ಮ ಧ್ಯೇಯದಲ್ಲಿ ಅವರಿಗಿರುವ ದೃಢ ನಂಬಿಕೆಗೆ—ಜನತೆ ನಮ್ಮ ಪಕ್ಷಕ್ಕೆ ಮತ ನೀಡಿರುವುದೇ ಸಾಕ್ಷಿಯಾಗಿದೆ. ಇದಕ್ಕೆ ನಾವು ಕೃತಜ್ಞರಾಗಿದ್ದೇವೆ. "

ಈ ರೀತಿಯಾಗಿ ತಮ್ಮ ಭಾಷಣವನ್ನು ಪ್ರಾರಂಭ ಮಾಡಿದ್ದೀರಿ. ಸ್ವಾಮಿ ಈ ಸರ್ಕಾರ ಅಧಿಕಾರಕ್ಕೆ ಬಂದು ಇಲ್ಲಿಗೆ ೬ ತಿಂಗಳು ಆಯಿತು, ಅರ್ಧ ವರ್ಷವೇ ಆಯಿತು. ತಾವು ಇಲ್ಲಿ ಏನು ವಿಚಾರ ಮಾಡಬೇಕು ಹಾಗೆ ಎಂದು ಹೇಳಿ ಇಲ್ಲಿ ಏನು ಸದನದ ಮುಂದಿಟ್ಟಿದ್ದೀರಿ ಅದರಲ್ಲಿ ೩ ತಿಂಗಳು ಹೋಯಿತು. ಇನ್ನು ೯ ತಿಂಗಳು ಮಾತ್ರ ಉಳಿದಿವೆ. ಜನತೆ ನಿಮ್ಮಲ್ಲಿವಿಶ್ವಾಸ ಇಟ್ಟಿದೆ. ಅದಕ್ಕಾಗಿಯೇ ಲೋಕ ಸಭೆಗೆ ನಿಮ್ಮಲ್ಲಿ ಅಚಲವಾದ ವಿಶ್ವಾಸವನ್ನಿಟ್ಟುಕೊಂಡಿರುವುದರಿಂದಲೇ ಆರಿಸಿ ಕಳುಹಿಸಿದ್ದಾರೆ, ಕಳುಹಿಸಿದ ಮೇಲೆ ತಾವು ಏನು ಮಾಡಿದ್ದೀರಿ ಎನ್ನತಕ್ಕ ಪ್ರಶ್ನೆ ನಮ್ಮ ಮುಂದಿರುತ್ತದೆ. ಜನತೆ ನಿಮ್ಮ ಮೇಲೆ ವಿಶ್ವಾಸವಿಟ್ಟಿರುವುದರಿಂದ ತಾವು ಇವತ್ತು ಇಲ್ಲಿ ಸರ್ಕಾರ ನಡೆಸುತ್ತಿದ್ದೀರಿ ಆದರೆ ಏನೇನು ಮಾಡಿದ್ದೀರಿ, ಏನೇನು ಕೆಲಸ ಕಾರ್ಯಗಳನ್ನು ಮಾಡಿಲ್ಲ ಎಂಬುದನ್ನು ಸ್ಪಷ್ಟವಾಗಿ ಈ ಸದನದಲ್ಲಿ ತಾವು ಹೇಳಬೇಕು. ಈಗ ಲೋಕಸಭೆಯು ಚುನಾವಣೆಗಳೂ ಆಯಿತು, ಇಲ್ಲಿದ್ದವರು ಅಲ್ಲಿಗೆ ಹೋದರು, ಅಲ್ಲಿದ್ದವರು ಇಲ್ಲಿಗೆ ಬಂದರು, " ಇಲ್ಲಿರುವವರು ಅಲ್ಲಿರುವವರಯ್ಯಾ, ಅಲ್ಲಿರುವವರು ಇಲ್ಲಿರುವವರಯ್ಯಾ " ಎಂದು ಹೇಳಿದ ಹಾಗೆ ಹೇಗೋ ಅಂತೂ ಸರ್ಕಾರ ಸ್ಥಾಪನೆ ಮಾಡಿ ನಡೆಸುತ್ತಿದ್ದೀರಿ ಸಂತೋಷ ಈಗ ತಮ್ಮ ಹೊಸ ಸರ್ಕಾರ ಸ್ಥಾಪನೆ ಮಾಡಿದ ಮೇಲೆ ಇಲ್ಲಿಯವರೆಗೆ ಯಾವ ಯಾವ ಕಾರ್ಯಕ್ರಮಗಳನ್ನು ಹಿಂದಿನ ಸರ್ಕಾರದವರು ಹಾಕಿಕೊಂಡಿದ್ದರೋ ಅವುಗಳನ್ನೇ ಮುಂದುವರಿಸಿಕೊಂಡು ಬರುತ್ತಿದ್ದೇವೆಂದು ಹೇಳಿದ್ದೀರೋ ಇಲ್ಲವೋ, ಮತ್ತೆ ಇನ್ನು ಏನು ಹೊಸದಾಗಿ ಮಾಡಿದ್ದೀರಿ ? ಅವತ್ತಿನಿಂದ ಇವತ್ತಿನವರೆಗೆ ಏನು ಮಾಡಿದ್ದೀರಿ,